**O.S. 32-21** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 11.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ರಿಂದ 6 ಪ್ರತಿವಾದಿ ಪರ ಶ್ರೀ ಸಿ ಹೆಚ್ ಎಸ್ ವಕೀಲರಿಂದಃ**

13. ಪ್ರತಿವಾದಿ -4 ರಿಂದ 6 ರವರು ಏನು ತಕರಾರು ಸಲ್ಲಿಸಿದ್ದಾರೆಂದು ಗೊತ್ತಿಲ್ಲ. ನನಗೆ ಆಸ್ತಿ ಬೇಕು, ಆ ಕಾರಣದಿಂದ ನಾನು ಪ್ರತಿವಾದಿ - 4 ರಿಂದ 6 ರವರನ್ನು ಸೇರಿಸಿದ್ದೇನೆ. ಅವರನ್ನು ಏಕೆ ಪಕ್ಷಗಾರರನ್ನಾಗಿ ಮಾಡಲಾಗಿದೆ ಅಂತಾ ಗೊತ್ತಿಲ್ಲ. ಸ ನಂಃ 199 ಇದು ಎಷ್ಟು ಎಕರೆ ಇದೆ ಅಂತಾ ಗೊತ್ತಿಲ್ಲ. ಅದು ನನ್ನ ತಂದೆ ಹೆಸರಿನಲ್ಲಿದೆ. ಈಗ ಯಾರ ಹೆಸರಿನಲ್ಲಿದೆ ಅಂತಾ ಗೊತ್ತಿಲ್ಲ. ನನಗೆ ಪ್ರತಿವಾದಿ 4 ರಿಂದ 6 ರವರು ಗೊತ್ತಿಲ್ಲ. ಸ ನಂಃ 199 ಇದು ಯಾವ ಸ್ಥಿತಿಯಲ್ಲಿದೆ ಅಂತಾ ಗೊತ್ತಿಲ್ಲ. ಸ ನಂಃ 199, ಹುಬ್ಬಳ್ಳಿ -ಗದಗ ರೋಡಿನ ರಾಷ್ಟ್ರೀಯ ಹೆದ್ದಾರಿಗೆ ಇದೆ. ಸದರಿ ಆಸ್ತಿ ಪೈಕಿ ಹೆದ್ದಾರಿ ಪ್ರಾಧಿಕಾರದವರು ರಸ್ತೆಗೆ ಸ್ವಾಧೀನಪಡಿಸಿಕೊಂಡ ಬಗ್ಗೆ ಗೊತ್ತಿಲ್ಲ. ಸ್ವಾಧೀನದ ಬಗ್ಗೆ ವಕೀಲರಿಗೆ ಮಾಹಿತಿ ನೀಡಿದ್ದೇನೆ. ಸ ನಂಃ 199 ನೇದ್ದರ ಜಮೀನನ್ನು ಪ್ರತಿವಾದಿ -4 ರಿಂದ 6 ರವರು ಖರೀದಿ ಮಾಡಿದ ನಂತರ ಸ್ವಾಧೀನಪಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ, ಪ್ರತಿವಾದಿ - 4 ರಿಂದ 6 ರವರಿಗೆ ಸ ನಂ. 199 ರ ಪೈಕಿ ಮಾರಾಟವಾದ ನಂತರ, ಅವರ ಹೆಸರಿನಲ್ಲಿ ಸ್ವಾಧೀನವಾಗಿದೆ ಅಂದರೆ ಗೊತ್ತಿಲ್ಲ. ಭೂ-ಸ್ವಾಧೀನಪಡಿಸಿಕೊಂಡ ಬಗ್ಗೆ ಸರಕಾರದವರು ಪತ್ರಿಕಾ ಪ್ರಕಟಣೆ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಯಾರಾದರೂ ತಂಟೆ-ತಕರಾರು ಇದ್ದರೆ ತಕರಾರು ಸಲ್ಲಿಸಬಹುದೆಂದು ಪ್ರಕಟಣೆ ಮಾಡಿರುತ್ತಾರೆ ಅಂದರೆ ಗೊತ್ತಿಲ್ಲ. ಸ ನಂಃ 199, 5 ಎಕರೆ 31 ಗುಂಟೆ ಅಂದರೆ ಗೊತ್ತಿಲ್ಲ. ಸದರಿ ಜಮೀನದಲ್ಲಿ ಒಂದನೇ ಪ್ರತಿವಾದಿಯಿಂದ 4 ನೇ ಪ್ರತಿವಾದಿ 39 ಗುಂಟೆ ಹಾಗೂ 24 ಗುಂಟೆ ಜಮೀನುಗಳನ್ನು ದಿಃ 19.11.2010 ರಂದು ಖರೀದಿ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಅದೇ ದಿನ ಒಂದನೇ ಪ್ರತಿವಾದಿ 6 ನೇ ಪ್ರತಿವಾದಿಗೆ, 38 ಗುಂಟೆ ಹಾಗೂ 39 ಗುಂಟೆಗಳನ್ನು ನೋಂದಣಿ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾನೆ ಗೊತ್ತಿಲ್ಲ. ಮತ್ತು 20.11.2010 ರಂದು ಒಂದನೇ ಪ್ರತಿವಾದಿ ಸದರಿ ಜಮೀನದಲ್ಲಿ 24 ಗುಂಟೆ ಜಮೀನನ್ನು 5 ನೇ ಪ್ರತಿವಾದಿಗೆ ನೋಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾನೆ ಅಂದರೆ ಗೊತ್ತಿಲ್ಲ. ಖರೀದಿ ಪತ್ರದ ಆಧಾರದ ಮೇಲೆ ಖರೀದಿದಾರರ ಹೆಸರು ಉತಾರದಲ್ಲಿ ಮಾಲಿಕರ ಹಾಗೂ ಸ್ವಾಧೀನದಾರರ ಕಾಲಂದಲ್ಲಿ ಹೆಸರು ದಾಖಲಾಗಿದೆ ಅಂದರೆ ಗೊತ್ತಿಲ್ಲ. ಉತಾರದಲ್ಲಿರುವ ಹೆಸರಿನ ಬಗ್ಗೆ ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ.

**O.S. 32-21** **PW : 1**

ಪ್ರತಿವಾದಿ 4 ರಿಂದ 6 ರವರ ಖರೀದಿ ಮಾಡಿದ ಜಮೀನು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಜನವಸತಿಗೆ ಬಿನ್ ಶೇತ್ಕಿ ಮಾಡಲಾಗಿದೆ ಅಂದರೆ ಸರಿಯಲ್ಲ. ಅದರಲ್ಲಿ ನೂರಾರು ಪ್ಲಾಟುಗಳನ್ನು ಮಾಡಿ ಪ್ರತಿವಾದಿ 4 ರಿಂದ 6 ರವರು ಸಾರ್ವಜನಿಕರಿಗೆ ಮಾರಾಟ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಖರೀದಿದಾರರು ನಲವಡಿ ಪಂಚಾಯತಿಯಲ್ಲಿ ತಮ್ಮ ಹೆಸರನ್ನು ನಮೂದು ಮಾಡಿಕೊಂಡು ಈ ಸ್ವತ್ತು ಮಾಡಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ಖರೀದಿದಾರರು ಮನೆ ಕಟ್ಟಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ಸದರಿ ಆಸಿಯಲ್ಲಿ ಮನೆ ಕಟ್ಟಿಕೊಂಡ ಬಗ್ಗೆ ಹೆದ್ದಾರಿ ಪಕ್ಕದಲ್ಲಿರುವುದರಿಂದ ಮನೆ ಕಾಣುತ್ತವೆ ಅಂದರೆ, ನಾವು ಆ ದಾರಿಗೆ ಹೋಗುವುದಿಲ್ಲ. ಸಾರ್ವಜನಿಕರು ಮನೆ ಕಟ್ಟಿಕೊಂಡ ಬಗ್ಗೆ ಹಾಗೂ ಈ - ಸ್ವತ್ತು ಮಾಡಿಕೊಂಡ ಬಗ್ಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪಂಚಾಯತಿಗೆ ಹೋಗಿ ಎಷ್ಟು ಜನ ಖರೀದಿ ಮಾಡಿದ್ದಾರೆ, ಎಷ್ಟು ಜನ ಮನೆ ಕಟ್ಟಿದ್ದಾರೆ ಎಂದು ನಾನು ವಿಚಾರಣೆ ಮಾಡಿಲ್ಲ. ಸದರಿ ಆಸ್ತಿಯಲ್ಲಿರುವ ರಸ್ತೆಗಳು ಪಂಚಾಯತಿಯ ಸ್ವಾಧೀನಕ್ಕೆ ಹೋಗಿರುತ್ತವೆ ಅಂದರೆ ಗೊತ್ತಿಲ್ಲ. ನನಗೆ ಆಸ್ತಿ ಮಾತ್ರ ಬೇಕು, ಅವರನ್ನು ಪಕ್ಷಗಾರರನ್ನಾಗಿ ಮಾಡುವುದು ಅವಶ್ಯಕತೆ ಇಲ್ಲ. ನಾನು ಬಿನ್ ಶೇತ್ಕಿ ಆದೇಶ ಹಾಗೂ ಪಂಚಾಯತಿ ದಾಖಲೆಗಳನ್ನು ಇದೂವರೆಗೂ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ. ಪ್ರತಿವಾದಿ 4 ರಿಂದ 6 ರವರಿಗೆ ಒಂದನೇ ಪ್ರತಿವಾದಿ ಆಸ್ತಿ ಮಾರಾಟ ಮಾಡುವಾಗ, ಆತನು ಕಾನೂನು ಬದ್ಧ ಮಾಲಿಕನಾಗಿದ್ದನು ಅಂದರೆ ಗೊತ್ತಿಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ 1 ನೇ ಪ್ರತಿವಾದಿ ಹೆಸರಿನಲ್ಲಿ ದಾಖಲೆಗಳು ಆದ ನಂತರ ನಾನು ಯಾವುದೇ ಪ್ರಾಧಿಕಾರ ಮುಂದೆ ಪ್ರಶ್ನೆ ಮಾಡಿಲ್ಲ. ಪ್ರತಿವಾದಿ 2 ಹಾಗೂ 3 ರವರು ನನ್ನ ತಂಗಿಯರು. ಅವರು ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸಿಲ್ಲ ಅಂದರೆ ಸರಿ. ನನಗೆ, ಪ್ರತಿವಾದಿ 2 ಹಾಗೂ 3 ರವರಿಗೆ ಈ ಖರೀದಿ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಆವಾಗಲೇ ಇತ್ತು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ, ಪ್ರತಿವಾದಿ 4 ರಿಂದ 6 ರವರಿಗೆ ನಮ್ಮ ಸಮಕ್ಷಮ ಆಸ್ತಿ ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ.

**O.S. 32-21** **PW : 1**

ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಗೊತ್ತಿಲ್ಲವೆಂದು ಹಾರಿಕೆ ಉತ್ತರ ಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ನಾನು ಪ್ರತಿವಾದಿ 1 ರಿಂದ 3 ರವರು ಸೇರಿ ಮಿಲಾಪಿಯಾಗಿ ಪ್ರತಿವಾದಿ 4 ರಿಂದ 6 ರವರಿಗೆ ಹಾಗೂ ಖರೀದಿದಾರರಿಂದ ಅನೈತಿಕವಾಗಿ ಹಣ ಪಡೆಯಲು ಸುಳ್ಳು ಪ್ರಕರಣ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.